**2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ**
**ನ್ಯಾಯಾಲಯ, ಹೆಚ್ ಡಿ ಕೋಟೆ**

**ಸಿ.ಸಿ ನಂ. 263/2018**

**ಸಿ.ಡಬ್ಲ್ಯೂ- 2 ಪಿ.ಡಬ್ಲ್ಯೂ- 3**

ಸಾಕ್ಷಿದಾರರ ಹೆಸರು : ಆದರ್ಶ್

ತಂದೆಯ ಹೆಸರು : ಬಸವರಾಜು

ವಯಸ್ಸು : 24 ವರ್ಷ

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಹಿರೇಹಳ್ಳಿ ಬಿ ಕಾಲೋನಿ

**ದಿನಾಂಕ 25.10.2024 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸ.ಸ. ಅ ರವರಿಂದಃ**

ದಿಃ 20.03.2017 ರಂದು 11.45 ರ ಸಮಯದಲ್ಲಿ ನನ್ನ ತಂದೆ ಬಾಳೆಕಂಬ ನೆಟ್ಟು ಬರಬೇಕಾದರೆ ಮಿಷನ್ ಶಬ್ದ ಕೇಳಿ ಬಂದಿರುತ್ತದೆ. ಅದು ನನ್ನ ಮುತ್ತಜ್ಜನಿಗೆ ಸೇರಿದ ಆಸ್ತಿಯಾಗಿದ್ದು, ಸದರಿ ಜಮೀನಿನ ವಿಚಾರವಾಗಿ ತಕರಾರು ಇರುತ್ತದೆ. ಆರೋಪಿತರು ಸದರಿ ಜಮೀನಿನಲ್ಲಿ ಮರ ಕಟಾವು ಮಾಡುತ್ತಿದ್ದು, ಅದನ್ನು ನನ್ನ ತಂದೆ ಕೇಳಲು ಹೋದಾಗ ನಾವು ದುಡ್ಡು ಕೊಟ್ಟು ಖರೀದಿ ಮಾಡಿರುತ್ತೇವೆ ಎಂದು ಆರೋಪಿ 1 ರವರು ನನ್ನ ತಂದೆಯ ಹೊಟ್ಟೆಯನ್ನು ಹಿಡಿದುಕೊಂಡು ಕೆಳಗೆ ಬೀಳಿಸಿ ಆರೋಪಿ 2 ರಿಂದ 4 ರವರು ಕಾಲಿನಿಂದ ತುಳಿದು ಹಲ್ಲೆ ಮಾಡಿರುತ್ತಾರೆ. ಆರೋಪಿ 1 ಮಚ್ಚಿನಿಂದ ನನ್ನ ತಂದೆಯ ಎಡಗೈಗೆ ಹೊಡೆದಿರುತ್ತಾರೆ. ಚಾಸಾ6 ರವರು ಬಂದು ಜಗಳ ಬಿಡಿಸಿರುತ್ತಾರೆ. ಸದರಿ ಸಮಯಕ್ಕೆ ನಾನು ಮತ್ತು ಚಾಸಾ1 ರವರು ಸ್ಥಳಕ್ಕೆ ಬಂದಿರುತ್ತೇವೆ. ಆಗ ಆರೋಪಿ 6 ರವರು ನನ್ನ ಎರಡೂ ಕಪಾಳಕ್ಕೆ ಮತ್ತು ಮೈಕೈಗೆ ಹೊಡೆದಿರುತ್ತಾರೆ. ಆರೋಪಿ 6 ರವರು ಆರೋಪಿ 5 ರವರಿಗೆ ದೊಣ್ಣೆ ಮತ್ತು ಮಚ್ಚನ್ನು ಕೊಟ್ಟು ಅವರನ್ನು ಹೊಡೆದು ಹಾಕಿ ಎಂದು

ಹೇಳಿರುತ್ತಾರೆ. ಚಾಸಾ1 ರವರಿಗೆ ಬಲಗೈಗೆ  ಮಚ್ಚಿನ ಹಿಡಿಯಿಂದ ಆರೋಪಿ 1 ರವರು ಹೊಡೆದಿರುತ್ತಾರೆ. ನಾನು ನನ್ನ ತಾಯಿಯನ್ನು ಹಿಡಿದುಕೊಳ್ಳಲು ಹೋದಾಗ ಆರೋಪಿ 5 ರವರು ದೊಣ್ಣೆಯಿಂದ ನನ್ನ ಎಡಭುಜಕ್ಕೆ ಹೊಡೆದಿರುತ್ತಾರೆ. ಆಗ ಬಿಡಿಸಿಕೊಳ್ಳಲು ನನ್ನ ತಂದೆ ಬಂದಾಗ ಮಚ್ಚಿನ ಮುಂಭಾಗದಿಂದ ಆರೋಪಿ 5 ರವರು ನನ್ನ ತಂದೆಯ ತಲೆಗೆ ಹೊಡೆದಿರುತ್ತಾರೆ. ಅಲ್ಲೆ ಇದ್ದ ಚಾಸಾ7 ಮತ್ತು 8 ರವರು ಜಗಳ ಬಿಡಿಸಿರುತ್ತಾರೆ. ನಂತರ ಆರೋಪಿತರು ಮರದ ವಿಷಯಕ್ಕೆ ಬಂದರೆ ನಿಮ್ಮನ್ನು ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ. ನಾನು ನನ್ನ ತಂದೆ ತಾಯಿಯನ್ನು ಹೆಚ್.ಡಿ.ಕೋಟೆಯ ಸರ್ಕಾರಿ ಆಸ್ಪತ್ರೆಗೆ ಖಾಸಗಿ  ವಾಹನದಲ್ಲಿ ಕರೆದುಕೊಂಡು ಬಂದು ದಾಖಲು ಮಾಡಿರುತ್ತೇನೆ. ಮುದ್ದೆ ಮಾಲು 1 ರಿಂದ 3 ನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಈ ವಿಚಾರವಾಗಿ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ಗುರುತಿಸಿದ ಮೇರೆಗೆ ಪಂಚನಾವೆಯನ್ನು **ನಿಪಿ-1** ಎಂದು ಸಾಕ್ಷಿಯ ಸಹಿಯನ್ನು **ನಿಪಿ-1(ಎ)** ಎಂದು ಗುರುತಿಸಲಾಯಿತು. ನಿಪಿ-1 ಕ್ಕೆ ಚಾಸಾ4 ಮತ್ತು 5 ಸಹಿ ಮಾಡಿರುತ್ತಾರೆ. ನನ್ನ ಸಮಕ್ಷಮ ಕೃತ್ಯಕ್ಕೆ ಬಳಸಿದ ಎರಡು ಮಚ್ಚು ಮತ್ತು ಒಂದು ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.

## ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ

ಚಾಸಾ1 ಮತ್ತು 3 ನನ್ನ ತಂದೆ ತಾಯಿ. ಆರೋಪಿ 5 ನನಗೆ ದೊಡ್ಡಪ್ಪ ಆಗಬೇಕು. ಆರೋಪಿ 5 ಮತ್ತು 6  ನನ್ನ ಸಂಬಂಧಿಕರು . ಉಳಿದ ಆರೋಪಿತರು ನಮ್ಮ ಊರಿನವರು. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನ ಮಧ್ಯೆ ಜಮೀನಿನ ವಿಚಾರವಾಗಿ ದಾವೆ ನಡೆಯುತ್ತಿದೆ  ಎಂದರೆ ಸರಿ . ಆರೋಪಿತರು ನಮ್ಮ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಘಟನೆ ನಡೆದ ಸಮಯದಲ್ಲಿ ನಾನು ಪ್ರಥಮ ವರ್ಷದ ಬಿ.ಕಾಂ ವ್ಯಾಸಂಗ ಮಾಡುತ್ತಿದ್ದೆ.

ನನ್ನ ಮನೆಯಿಂದ ಘಟನಾ ಸ್ಥಳ 200 ಮೀಟರ್ ಅಂತರದಲ್ಲಿರುತ್ತದೆ. ಗಲಾಟೆ ನಡೆಯುತ್ತಿದೆ ಎಂದು ಹೇಗೆ ಗೊತ್ತಾಯಿತು ಎಂದರೆ ಶಬ್ದ ಕೇಳಿರುತ್ತದೆ ಎಂದು ನುಡಿಯುತ್ತಾರೆ. ಗಲಾಟೆ ನಡೆದಾಗ ಸುಮಾರು ಜನ ಇದ್ದು ಎಷ್ಟು ಜನ ಇದ್ದರು ಎಂದು ಗೊತ್ತಿಲ್ಲ. ನಾನು ಮತ್ತು ಚಾಸಾ1 ರವರು ಹೋದಾಗ ಗಲಾಟೆ  ಮುಗಿದು ಹೋಗಿತ್ತು ಎಂದರೆ ಸರಿಯಲ್ಲ.

ಚಾಸಾ3 ರವರಿಗೆ ಹೊಡೆದಿರುವುದನ್ನು ನಾನು ನೋಡಿರುವುದಿಲ್ಲ. ಚಾಸಾ3 ಮತ್ತು 6 ರವರು ಹೇಳಿದ ನಂತರ ನನಗೆ ಗೊತ್ತಾಗಿರುತ್ತದೆ. ಗಲಾಟೆಯನ್ನು ನಾನು ಬಿಡಿಸಿರುವುದಿಲ್ಲ. ಯಾವ

ಮಚ್ಚಿನಿಂದ ಹೊಡೆದಿರುತ್ತಾರೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ. ನನ್ನ ತಂದೆಯ ತಲೆಗೆ ರಕ್ತಗಾಯವಾಗಿತ್ತು.

ಸಾಮಾನ್ಯವಾಗಿ ಗಲಾಟೆ ನಡೆದರೆ ಊರಿನ ಜನ ಸೇರುತ್ತಾರೆ ಎಂದರೆ ಎಲ್ಲಾ ಕೂಲಿ ಕೆಲಸಕ್ಕೆ ಹೋಗಿದ್ದರು ಎಂದು ನುಡಿಯುತ್ತಾರೆ. ಗಲಾಟೆ ಆದ ಮಾರನೇ ದಿನ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಸುಮಾರು 11.00 ಗಂಟೆಗೆ ಮನೆಗೆ ಬಂದಿರುತ್ತೇನೆ. ಮುದ್ದೆ ಮಾಲುಗಳನ್ನು ಆ ದಿನ ನಾನು ಎತ್ತಿಟ್ಟುಕೊಂಡಿರಲಿಲ್ಲ, ಮರುದಿನ ಮಹಜರ್ ಸಮಯದಲ್ಲಿ ಪೊಲೀಸರಿಗೆ ನೀಡಿರುತ್ತೇನೆ. ಆಸ್ಪತ್ರೆಯಲ್ಲಿ ಹೇಳಿಕೆ ನೀಡಿರುತ್ತೇನೆ. ಮಹಜರನ್ನು ದಿಃ 21.03.2017 ರಂದು 11.00 ರಿಂದ 12.00 ಗಂಟೆಯವರೆಗೆ ಮಾಡಿರುತ್ತಾರೆ.

ನಾನು ಮತ್ತು ಚಾಸಾ4 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿರುತ್ತೇವೆ. ಘಟನಾ ಸಮಯದಲ್ಲಿ ನಾನು ಇಲ್ಲದೇ ಇರುವುದರಿಂದ ಘಟನೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸಿವಿಲ್ ದಾವೆಗೆ ಸಹಾಯವಾಗಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಗಲಾಟೆ ನಡೆಯದೇ ಇದ್ದರೂ ಆರೋಪಿತರ ವಿರುದ್ಧ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳಿಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ . ಮುದ್ದೆ ಮಾಲುಗಳ ಮೇಲೆ ನನ್ನ ಸಹಿ ಪಡೆದುಕೊಂಡಿರುವ ಬಗ್ಗೆ ನನಗೆ ನೆನಪಿಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾ. ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**